13-3-25
69-0-155

**ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಪಿ. ಹೆಚ್. ಪೂಜಾರ್ (ಬಾಗಲಕೋಟೆ) ಇವರು ನೀಡಿರುವ ಶೂನ್ಯ ವೇಳೆ ಪ್ರಶ್ನೆಯ ಮೇಲಿನ ಹೇಳಿಕೆ**

**ವಿಷಯ:** ಬಾಗಲಕೋಟೆ ಜಿಲ್ಲೆಯಲ್ಲಿ ನೀರಿನ ಸಮಸ್ಯೆ ತಲೆದೋರಿದ್ದು, ನೀರಿನ ಬವಣೆಯನ್ನು ಬಗೆಹರಿಸಿ, ನೀರಿನ ವ್ಯವಸ್ಥೆ ಕಲ್ಪಿಸುವ ಬಗ್ಗೆ.

**ಹೇಳಿಕೆ:** ಬಾಗಲಕೋಟೆ ಜಿಲ್ಲೆಯ 09 ತಾಲ್ಲೂಕುಗಳಲ್ಲಿ 641 ಗ್ರಾಮಗಳಿದ್ದು, ಇದರಲ್ಲಿ 442 ಗ್ರಾಮಗಳು ನದಿ ನೀರಿಗೆ ಅವಲಂಬಿತವಾಗಿ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳಿಂದ ನೀರು ಪೂರೈಕೆ ಮಾಡಲಾಗುತ್ತಿದೆ. ಇನ್ನುಳಿದ 199 ಗ್ರಾಮಗಳು ಕೊಳವೆ ಬಾವಿಗಳ ಆಧಾರಿತ ನೀರು ಸರಬರಾಜು ಯೋಜನೆಗಳ ಮೇಲೆ ಅವಲಂಬಿತವಾಗಿರುತ್ತದೆ. ಕೃಷ್ಣಾ, ಮಲಪ್ರಭಾ ಮತ್ತು ಘಟಪ್ರಭಾ ನದಿ ಮೂಲಗಳಿಂದ 39 ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳಿದ್ದು, ಇದರಲ್ಲಿ 38 ಯೋಜನೆಗಳು ಕಾರ್ಯನಿರ್ವಹಿಸುತ್ತವೆ. ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧದಲ್ಲಿ ಲಗತ್ತಿಸಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಬಾದಾಮಿ ತಾಲ್ಲೂಕಿನ ಐದು ಗ್ರಾಮಗಳಾದ 1) ದಾನಕ್ ಶೀರೂರ 2) ಮಂಗಳೂರು 3) ಕೈನಕಟ್ಟಿ 4) ಮಣ್ಣೇರಿ 5) ಕಿತ್ತಲಿಗಳಲ್ಲಿ ಹಾಗೂ ಹುನಗುಂದ ತಾಲೂಕಿನ ಮರಟಗೇರಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಿದ್ದು, ಸದರಿ ಗ್ರಾಮದಲ್ಲಿರುವ ಹೆಚ್ಚಿನ ಇಳುವರಿ ಇರುವ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯುವ ನೀರಿನ ಸಮಸ್ಯೆಯ ಬವಣೆಯನ್ನು ಬಗೆಹರಿಸಲಾಗಿದೆ.

ಕೊಳವೆ ಬಾವಿಗಳ ಫ್ಲಷಿಂಗ್ ಮತ್ತು ರೀಡ್ರಿಲಿಂಗ್ ಸಲುವಾಗಿ ರೂ.154.75ಲಕ್ಷ ಮೊತ್ತದ 192 ಕಾಮಗಾರಿಗಳಿಗೆ 2023-24ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.

ಸರ್ಕಾರದ ಆದೇಶದ ಪತ್ರದ ಸಂಖ್ಯೆ: ಗ್ರಾಕುನೀ&ನೈಇ/ ಲೆಶಾ/ ಬಿಡುಗಡೆ/ 8/ 2023/ 1963(ಇ-ಆಫೀಸ್) ಬೆಂಗಳೂರು ದಿನಾಂಕ: 01-02-2024ರಲ್ಲಿ Contingent Action Plan (CAP) ಅಡಿ ಮಾನ್ಯ ಶಾಸಕರ ಸೂಚನೆಯಂತೆ ಪ್ರತಿ ತಾಲ್ಲೂಕಿಗೆ ರೂ.25.00ಲಕ್ಷಗಳ ಅನುದಾನ ಮಂಜೂರಾಗಿದ್ದು, ಅದರಂತೆ ಬಾಗಲಕೋಟೆ ಜಿಲ್ಲೆಗೆ ಒಟ್ಟು ರೂ.225.00ಲಕ್ಷಗಳ ಕ್ರಿಯಾ ಯೋಜನೆಯಂತೆ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕುಡಿಯುವ ನೀರಿನ ಬವಣೆಯನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ.

**(ಪ್ರಿಯಾಂಕ್ ಖರ್ಗೆ)**
**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು**

**ಸಂ:ಗ್ರಾಕುನೀ&ನೈಇ/46/ಮುಇಂ/ತಾಂತ್ರಿಕ/2024**